ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
# ಹೊಸ ಸಾರ್ವಜನಿಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01.

ಸಂಖ್ಯೆ: ಸಿ3(7)ಪ್ರಾ..ಶಿ:ವರ್ಗ:ವೈ.ತ:02/2016-17 ದಿನಾಂಕ:-01-9-2016

ಬೆಂಗಳೂರು ವಿಭಾಗದ ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,

ವಿಷಯ:- ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಆದ್ಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ" ಶಿಕ್ಷಕರು ಮತ್ತು ಅವರ [ಪತಿ ಅಥವಾ ಪತ್ನಿ, ಮಕ್ಕಳು] ಅವಲಂಬಿತರ ಪ್ರಕರಣಗಳಿಗೆ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೀಡಿರುವ ವೈದ್ಯಕೀಯ ಪ್ರಮಾಣ ಪತ್ರಗಳ ಬಗ್ಗೆ ವಿಭಾಗ ಮಟ್ಟದಲ್ಲಿ ತ್ರಿ ಸದಸ್ಯ ಸಮಿತಿಗೆ ಶಿಕ್ಷಕರನ್ನು ತಪಾಸಣೆಗೆ ಹಾಜರುಪಡಿಸಿ ವೈದ್ಯಕೀಯ ಪ್ರಮಾಣ ಪತ್ರದ ನೈಜತೆಯ ದಾಖಲೆಗಳನ್ನು ಪರಿಶೀಲಿಸುವ ಬಗ್ಗೆ- ಬೆಂಗಳೂರು ವಿಭಾಗದ ಜಿಲ್ಲೆಗಳಿಗೆ ಸಂಬಂಧಪಟ್ಟ ಸೂಚನೆಗಳು.

ಉಲ್ಲೇಖ:-1. ಈ ಕಚೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಸಿ3(7) ಪ್ರಾ.ಶಾ.ಶಿವರ್ಗಾ01/16-17 ದಿ:01.8.2016 ಹಾಗೂ ಸಂಬಂಧಿತ ಜ್ಞಾಪನಗಳು.

2 ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ, ಆನಂದರಾವ್ ವೃತ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಂಡಿಎಕ್ಸ್(2)322/2015-16 ದಿನಾಂಕ: 24-8-2016.

3 ಈ ಕಛೇರಿ ಪತ್ರ ಸಮ ಸಂಖ್ಯೆ: ಸಿ3(7)ಪ್ರಾ..ಶಿ:ವರ್ಗ:ವೈ.ತ:02/2016-17 ದಿನಾಂಕ:-31-8-2016

-*****-

2016-17 ನೇ ಸಾಲಿನ ಅಂತರ್ ಘಟಕ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ(ಅವಲಂಬಿತರನ್ನೊಳಗೊಂಡಂತೆ) ತೀವ್ರತರ ಕಾಯಿಲೆ ಪ್ರಕರಣದಲ್ಲಿ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂಧಿ ಹಾಗೂ ಹೆಚ್.ಐ.ವಿ ಕಾಯಿಲೆಗಳಿಗೆ ಮಾತ್ರ) ಮತ್ತು ಅಂಗವಿಕಲ ಶಿಕ್ಷಕರುಗಳು ದಿನಾಂಕ: 02.09.2016 ರಿಂದ ದಿನಾಂಕ 12.09.2016 ರ ಒಳಗಾಗಿ ಯಾವ ವಿಭಾಗದಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೋ ಅದೇ ವಿಭಾಗದಲ್ಲಿ ನಿರ್ಧಿಷ್ಟಪಡಿಸಿದ ಆಸ್ಪತ್ರೆಗಳಲ್ಲಿ ವೈದ್ಯಕೀಯ ತಪಾಸಣೆಗೆ ಒಳಪಡುವ ಬಗ್ಗೆ ಮತ್ತು ಪ್ರಮಾಣ ಪತ್ರಗಳನ್ನು ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಕ್ರಮದ ಬಗ್ಗೆ ಉಲ್ಲೇಖ ಪತ್ರ 3 ರಲ್ಲಿ ಈಗಾಗಲೇ ಅಗತ್ಯ ಸೂಚನೆಗಳನ್ನು ನೀಡಲಾಗಿದೆ.

ಬೆಂಗಳೂರು ವಿಭಾಗದ ಜಿಲ್ಲೆಗಳಲ್ಲಿ ಸಲ್ಲಿಸಲಾಗಿರುವ ಅಂತರ್‌ಘಟಕ ವೈದ್ಯಕೀಯ/ಅಂಗವಿಕಲ ಆದ್ಯತಾ ವರ್ಗಾವಣಾ ಪ್ರಕರಣಗಳ ಅರ್ಜಿಗಳ ಕುರಿತು, ಜಿಲ್ಲೆಯ ವರ್ಗಾವಣಾ ನೋಡಲ್ ಅಧಿಕಾರಿಯವರು ತಮ್ಮ ಜಿಲ್ಲೆಗೆ ಸಂಬಂಧಪಟ್ಟ ಅಂತಹ ಶಿಕ್ಷಕರು ಸಂಬಂಧಿತ ಆಸ್ಪತ್ರೆಯಲ್ಲಿ ತಪಾಸಣೆಗೊಳಗಾಗಲು ಅಗತ್ಯ ಸಂಯೋಜನಾ ಕಾರ್ಯವನ್ನು ನಿರ್ವಹಿಸತಕ್ಕದ್ದು ಮತ್ತು ಸದರಿ ಆಸ್ಪತ್ರೆಯಿಂದ ಮೂಲ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದು ದೃಢೀಕೃತ ಪ್ರತಿಯನ್ನು ಸದರಿ ಪ್ರಕರಣದ ಶಿಕ್ಷಕರಿಗೆ ವಿತರಿಸಿದ ನಂತರ ಮೂಲ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಮುಖ ತಃಖ್ತೆಯಲ್ಲಿ ವಿವರ ನಮೂದಿಸಿ, ದಿನಾಂಕ: 13-09-2016ರ ಒಳಗೆ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಇವರಿಗೆ ತಲುಪುವಂತೆ ಮುದ್ದಾಂ ಸಲ್ಲಿಸತಕ್ಕದ್ದು. ಹಾಗೆ ಸಲ್ಲಿಸುವಾಗ ಸದರಿ ಶಿಕ್ಷಕರ ವರ್ಗಾವಣಾ ಅರ್ಜಿಯ ದೃಢೀಕೃತ ಪ್ರತಿಯನ್ನು ಸಹ ಲಗತ್ತಿಸುವುದು.

(ಕೆ. ಆನಂದು)
ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ/ಬೆಳಗಾವಿ/ಧಾರವಾಡ ರವರ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ವಿಭಾಗೀಯ ಸಹನಿರ್ದೇಶಕರು, ಸಾ.ಶಿ.ಇ ಬೆಂಗಳೂರು/ಮೈಸೂರು/ಧಾರವಾಡ/ಕಲಬುರ್ಗಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ನಿರ್ದೇಶಕರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಸಾ.ಶಿ. ಆಯುಕ್ತರ ಕಛೇರಿ, ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
4. ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲ್ಬುರ್ಗಿ/ಬೆಳಗಾವಿ/ಧಾರವಾಡ ರವರ ಸೂಕ್ತ ಕ್ರಮಕ್ಕಾಗಿ.
5. ಸಭಾಪತಿಯವರು ವೈದ್ಯಕೀಯ ಮಂಡಳಿ. ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು/ಕೆ.ಆರ್. ಆಸ್ಪತ್ರೆ ಮೈಸೂರು/ಜಿಲ್ಲಾ ಆಸ್ಪತ್ರೆ ಬೆಳಗಾವಿ/ಜಿಲ್ಲಾ ಆಸ್ಪತ್ರೆ ಕಲಬುರ್ಗಿ ಇವರುಗಳಿಗೆ ಸೂಕ್ತ ಕರಮಕ್ಕಾಗಿ.
6. ಕಛೇರಿ ಪ್ರತಿ.